ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಹೌದು. ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಈ ಯೋಜನೆಯ ಕೈಗೊಳ್ಳಲು ಉದ್ದೇಶಿಸಿದ್ದು ಪೈಲಟ್ (Pilot) ಪ್ರಾಜೆಕ್ಟ್ ತಯಾರಿಕೆಯ ಹಂತದಲ್ಲಿದೆ.

ಆ) ಇನ್ನೂ ನಿರ್ಧರಿತವಾಗಿಲ್ಲ.

ಇ) ಈ ಯೋಜನೆಯ ರೂಪ ರೇಷೆಗಳು ಮುಗಿದ ನಂತರ ಆರ್ಥಿಕ ಲಭ್ಯತೆ ಆಧರಿಸಿ ನಿರ್ಧರಿಸಲಾಗುವುದು.

ಬಸವನ ಬಾಗೇವಾಡಿ ಪಟ್ಟಣಕ್ಕೆ ಕುಡಿಯುವ ನೀರು ಯೋಜನೆ ಅನುಷ್ಠಾನ.

2321(3414) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬಸವನ ಬಾಗೇವಾಡಿ ಪಟ್ಟಣಕ್ಕೆ ಕೃಷ್ಣಾ ನದಿಯಿಂದ ಕುಡಿಯುವ ನೀರಿನ ಯೋಜನೆಗೆ ಸರ್ಕಾರ ನಿಗಧಿಪಡಿಸಿರುವ ಹಣವೆಷ್ಟು?

2. ಈಗಾಗಲೇ ಖರ್ಚಾಗಿರುವ ಹಣವೆಷ್ಟು?

3. ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರವು ನಿಗಧಿಪಡಿಸಿದ ಕಾಲಾವಕಾಶವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ರೂ. 15.00 ಕೋಟಿಗಳ ನೀರು ಸರಬರಾಜು ಯೋಜನೆಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

2. ರೂ. 681.44 ಲಕ್ಷಗಳು

3. ಎರಡು ವರ್ಷಗಳು.

ಬಿಜಾಪುರ ನಗರದಲ್ಲಿ ವಿಮಾನ ನಿಲ್ದಾಣ ಸ್ಥಾಪನೆ.

2323(3416) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನ ಬಾಗೇವಾಡಿ) :— ಮಾನ್ಯ ಒಳಾಡಳಿತ, ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಐತಿಹಾಸಿಕ ಬಿಜಾಪುರ ನಗರದಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಒಳಾಡಳಿತ, ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು) :—

ಅ) ಸರ್ಕಾರದ ಉದ್ದೇಶವು ಪ್ರಾರಂಭಿಕವಾಗಿ ಖಾಸಗಿ ವಲಯದವರ ಸಹಭಾಗಿತ್ವದೊಂದಿಗೆ ಪ್ರಸ್ತುತವಿರುವ ಮೈಸೂರು, ಹುಬ್ಬಳ್ಳಿ, ಬಳ್ಳಾರಿಗಳಲ್ಲಿನ ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಿ ಹಾಗೂ ವಾಯು ಸಂಚಾರ ಪ್ರಾರಂಭಿಸುವುದಾಗಿದೆ. ಇದಾದ ನಂತರ ಸಾಮರ್ಥ್ಯವುಳ್ಳ ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪರಿಗಣಿಸಲಾಗುವುದು.

ಆ) ಅನ್ವಯಿಸುವುದಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಶ್ರೀ ಶ್ರೀನಿವಾಸ ಡಿಸ್ಟಲರೀಸ್ ಸಂಸ್ಥೆಗೆ ಮದ್ಯ ತಯಾರು ಘಟಕಕ್ಕೆ ಪರವಾನಿಗೆ ನೀಡಿರುವುದು.

2324(3129) ಶ್ರೀ ಚೆಲುವರಾಯ ಸ್ವಾಮಿ ಎಸ್. (ನಾಗಮಂಗಲ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶ್ರೀ ಶ್ರೀನಿವಾಸ ಡಿಸ್ಟಲರೀಸ್ ಸಂಸ್ಥೆಗೆ ಮದ್ಯ ತಯಾರು ಘಟಕವನ್ನು ಸ್ಥಾಪಿಸಲು ಅಬಕಾರಿ ಇಲಾಖೆಯವರು ಪರವಾನಗಿಯನ್ನು ನೀಡಿದ್ದಾರೆಯೇ;

ಆ) ನಾಗಮಂಗಲ ತಾಲ್ಲೂಕಿನ ಹಾಲಳ್ಳು ಸರ್ವೆ ನಂಬರ್ 22ರಲ್ಲಿ ಅನಧಿಕೃತವಾಗಿ ಯಾವುದೇ ಪರವಾನಿಗೆಯನ್ನು ಪಡೆಯದೇ ಶ್ರೀ ಶ್ರೀನಿವಾಸ ಡಿಸ್ಟಿಲರೀಸ್ ಎಂಬುವರು ಮದ್ಯ ತಯಾರು ಘಟಕದ ಕೆಲಸ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದರೆ ಇದನ್ನು ತಡೆಯಲು ಸರ್ಕಾರದ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ